ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 3, November-December, 2023, Pp. 33-39.
©*IIMRD*, Mysuru
IIMRD JOURNALS

www.iimrd.com

# ಕನ್ನಡ ವೃತ್ತಿ ರಂಗಭೂಮಿಯ ಸಿಂಹಾವಲೋಕನ

**ಆರ್.ಪಿ.ಮಂಜುನಾಥ್.ಬಿ.ಜಿ.ದಿನ್ನೆ***

*ರಂಗ ಸಂಶೋಧಕರು, ಪ್ರದರ್ಶನ ಕಲಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**ಸಾರಾಂಶ: (Abstract)**

*'ಕಲೆ ಕೇವಲ ವಿಲಾಸಕ್ಕಲ್ಲ ವಿಕಾಸಕ್ಕೂ' ಕೂಡ ಎಂಬುದನ್ನು ಕನ್ನಡ ರಂಗಭೂಮಿ ಸಾಕ್ಷಿಕರೀಸಿದೆ. ಮನೋರಂಜನೆಯ ಮಾಧ್ಯಮವಾಗಿದ್ದ ರಂಗಭೂಮಿ ಸಮಾಜದ ಮನೋವಿಕಾಸಕ್ಕಾಗಿ ಮತ್ತು ಮನಸ್ಸುಗಳ ಒಕ್ಕೂಟಕ್ಕಾಗಿ ಬಳಕೆಯಾದ ಹಲವು ಸಂದರ್ಭಗಳಿವೆ. ಕನ್ನಡ ವೃತ್ತಿರಂಗಭೂಮಿಯು ಸುಮಾರು 18ನೇ ಶತಮಾನದಲ್ಲಿ ಮರಾಠಿ ಮತ್ತು ಪಾರ್ಸಿ ನಾಟಕ ಕಂಪನಿಗಳ ಪ್ರೇರಪಣೆಯಿಂದ ಬೆಳಕಿಗೆ ಬಂದಿತು. ಇದಕ್ಕೆ ನೂರಿಪ್ಪತ್ತೈದು ವರ್ಷಗಳ ಇತಿಹಾಸವಿದೆ. ನಾಡಿನ ಭಾಷೆ ಮತ್ತು ನಾಟಕಕಲೆಯ ಮೂಲಕವೇ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಿದ ಕೀರ್ತಿಯೂ ವೃತ್ತಿರಂಗಭೂಮಿಗೆ ಸಲ್ಲುತ್ತದೆ. ಇದರೊಂದಿಗೆ ಕನ್ನಡ ನಾಡಿನ ಕಲೆ ಮತ್ತು ಸಂಸ್ಕೃತಿಯನ್ನು ಇಡೀ ಜಗತ್ತಿಗೆ ಪರಿಚಯಿಸಿದೆ. ಪ್ರಥಮಾದಿಯಲ್ಲಿ ಚಿಕ್ಕದಾಗಿ ನಡೆಯುತ್ತಿದ್ದ ವೃತ್ತಿರಂಗಭೂಮಿ ಆಧುನಿಕ ರಂಗತಂತ್ರಗಳು, ಸ್ತ್ರೀ ಕಲಾವಿದರು ಆಗಮನವಾದ ನಂತರ ಏರುಗತಿಯಲ್ಲಿ ಓಡಲಾರಂಭಿಸಿತು. ಅದಲ್ಲದೇ ದಿನದಿಂದ ದಿನಕ್ಕೇ ಪೈಪೋಟಿಯ ತೆರದಲ್ಲಿ ನಾಟಕ ಕಂಪನಿಗಳು ಉದಯವಾದವು. ಅಲ್ಲದೇ ಸ್ಪರ್ಧೆಯ ರೀತಿಯ ಗುಣಮಟ್ಟದ ನಾಟಕಗಳ ಪ್ರದರ್ಶನಗೊಂಡವು. ಆ ನಿಟ್ಟಿನಲ್ಲಿ ಕನ್ನಡ ವೃತ್ತಿರಂಗಭೂಮಿಯಲ್ಲಿ ತೀವ್ರವಾದ ಪೈಪೋಟಿ ನಡೆಸಿದ ಕಂಪನಿಯೆಂದರೆ ಗುಬ್ಬಿ ನಾಟಕ ಕಂಪನಿ. ಇದರ ಮಾಲೀಕ ಮತ್ತು ಅಗ್ರಮಾನ್ಯ ನಟರಾದ ಗುಬ್ಬಿ ವೀರಣ್ಣನವರು ನಾಟಕವನ್ನು ಜೀವಂತಿಕರೀಸುವುದಕ್ಕಾಗಿ ಜೀವಂತ ಪ್ರಾಣಿಗಳನ್ನು, ಬೃಹತ್ಸಾತ್ರದ ರಂಗತಂತ್ರಗಳನ್ನು ರಂಗವೇದಿಕೆಯೊಂದರ ಮೇಲೆ ಬಳಸಿದ ಶ್ರೇಯಸ್ಸು ಗಳಿಸಿದ್ದಾರೆ. ಅಷ್ಟೇಲ್ಲದೇ ಶ್ರೇಷ್ಠಾತಿ ಶ್ರೇಷ್ಟ ನಟನಟಿಯರು ವೃತ್ತಿರಂಗಭೂಮಿಯನ್ನು ಮೇರು ಶಿಖರಕ್ಕೆ ಕೊಂಡೊಯ್ದರು. ಆದರೆ 20ನೇ ಶತಮಾನದಲ್ಲಿ ಕಾಣಿಸಿಕೊಂಡ ಹಲವು ಕಾರಣಗಳಿಂದಾಗಿ ನಾಟಕ ಕಂಪನಿಗಳು ಒಂದೊಂದಾಗಿ ಮುಚ್ಚುತ್ತಾ ವೃತ್ತಿರಂಗಭೂಮಿ ಅವಸಾನದ ಅಂಚಿಗೆ ಸರಿಯಲಾರಂಭಿಸಿತು. ಈಗಾಗಗಲೇ ತುಂಬಾ ಸಂಕಷ್ಟ ಪರಿಸ್ಥಿತಿಯಲ್ಲಿರುವ ವೃತ್ತಿರಂಗಭೂಮಿ ಕಲಾವಿದರ, ಮಾಲೀಕರ, ಕಲಾಭಿಮಾನಿಗಳ, ಸುಶಿಕ್ಷಿತರ ಮತ್ತು ಸರ್ಕಾರಿಂದ ಕಾಯಕಲ್ಪ ದೊರೆಯಬೇಕಾಗಿದೆ.*

**ಮುಖ್ಯಪದಗಳು (Keywords):** ವೃತ್ತಿ ರಂಗಭೂಮಿ, ಶಾಂತಕವಿ, ಗರೂಡ ಸದಾಶಿವರಾಯ, ಬಳ್ಳಾರಿ ರಾಘವ, ಹವ್ಯಾಸಿ ರಂಗಭೂಮಿ, ಕಾಯಕಲ್ಪ, ನಾಟಕ ಶಾಲೆಗಳು, ರಂಗಶಿಕ್ಷಣ.

## ಪೀಠಿಕೆ

ಕನ್ನಡ ಭಾಷೆಗೆ ಇರುವ ಪಾಚೀನತೆ ಕನ್ನಡ ನಾಟಕ ಸಾಹಿತ್ಯ ಪ್ರಕಾರಕ್ಕೆ ಪ್ರಾಚೀನ ಪರಂಪರೆಯೆಂಬುದಿಲ್ಲ. ಶಾಸನಗಳ ಆಧಾರದಿಂದ ಹೇಳುವುದಾದರೆ ಕನ್ನಡ ರಂಗಭೂಮಿ ಹಾಗೂ ರಂಗಕಲೆಗಳು ಒಂದು ಸಾವಿರ ವರ್ಷಗಳಷ್ಟು ಪ್ರಾಚೀನವಾಗಿವೆ. ಆದರೆ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ

*Please cite this article as: ಮಂಜುನಾಥ್.ಬಿ.ಜಿ.ದಿನ್ನೆ. ಆರ್.ಪಿ.* (2023). ಕನ್ನಡ ವೃತ್ತಿ ರಂಗಭೂಮಿಯ ಸಿಂಹಾವಲೋಕನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(3). ಪು.ಸಂ.* 33–39

17ನೆಯ ಶತಮಾನದವರೆಗೆ ಒಂದಾದರೂ ನಾಟಕಗ್ರಂಥ ನಮಗೆ ದೊರೆತಿಲ್ಲ. ನಮ್ಮ ಸಾಹಿತ್ಯದಲ್ಲಿ ನಟ, ನಾಟಕ, ನಾಟಕಶಾಲೆಗಳನ್ನು ಕುರಿತು ಅನೇಕ ಗಮನಾರ್ಹವಾದ ಉಲ್ಲೇಖಗಳಿದ್ದು, ಕನ್ನಡ ನಾಟ್ಯಕಲೆಯ ಪ್ರಾಚೀನತೆಯ ಬಗೆಗೆ, ಅವು ನಮ್ಮ ಕುತೂಹಲವನ್ನು ಕೆರಳಿಸುತ್ತವೆ. ರಂಗಕಲಾ ನಾಟ್ಯಾಚಾರನೂ ಆಗಿದ್ದ 'ನಟಸೇವ್ಯ' ಎಂಬುವನನ್ನು ಕೀರ್ತಿಸುವ ಎಂಟನೆಯ ಶತಮಾನದ ಪಟ್ಟದಕಲ್ಲಿನ ಶಾಸನ, ಮುಗುಂದ ಶಾಸನ (1045) ದಲ್ಲಿ ಉಲ್ಲೇಖಿತವಾದ 'ಕನ್ನಡ ನಾಟಕ ಶಾಲೆ, ಕೆಳದಿಯ ವೆಂಕಟಪ್ಪನಾಯಕನು (1582–169) ಇಕ್ಕೇರಿಯ ಅರಮನೆಯಲ್ಲಿ ನಿರ್ಮಿಸಿದ್ದ ಎನ್ನಲಾದ ನಾಟಕಶಾಲೆ, ಕಂಠೀರವ ನರಸರಾಜ (1638–56)ರ ಅರಮನೆಯಲ್ಲಿಯ ನಾಟಕಶಾಲೆಗಳು ಕನ್ನಡ ನಟ ಹಾಗೂ ನಾಟಕಶಾಲೆಗಳನ್ನು ಕುರಿತ ಉಜ್ವಲ ನಿದರ್ಶನಗಳಾಗಿವೆ. ವಿಜಯನಗರದ (1530) ಕಾಲಕ್ಕಾದರೂ ಆಧುನಿಕ ಮಾದರಿಯ ಕನ್ನಡ ರಂಗಭೂಮಿ ತಲೆಯೆತ್ತಿತೆಂದು ತಿಳಿಯುವುದಕ್ಕೆ ಸ್ಪಷ್ಟಾಧಾರಗಳಿವೆ. ಆದರೆ ಕನ್ನಡ ನಾಟಕದ ಪ್ರದರ್ಶನ ಅಥವಾ ಸಾಹಿತ್ಯದ ಕುರಿತಾಗಿ ಯಾವುದೇ ಪ್ರಾಚೀನ ಆಧಾರಗಳು ದೊರೆಯುವುದಿಲ್ಲ.

ಪ್ರಾಚೀನ ನಾಟಕಕಾರರಿಗೆ ಕನ್ನಡಕ್ಕಿಂತ ಸಂಸ್ಕೃತ ನಾಟಕ ಸಾಹಿತ್ಯದ ನಿಕಟ ಸಂಪರ್ಕವಿದ್ದಿತೆಂಬುದನ್ನು ಮರೆಯುವಂತಿಲ್ಲ. ಭಾಗವತದ ವಿಷಯವನ್ನೆತ್ತಿಕೊಂಡು, ಶ್ರೀಹರ್ಷನ 'ರತ್ನಾವಳೀ' ಎಂಬ ಸಂಸ್ಕೃತ ನಾಟಕವನ್ನಾಧರಿಸಿ 'ಮಿತ್ರವಿಂದಾ ಗೋವಿಂದ' ನಾಟಕವನ್ನು ರಚಿಸಿದ 'ಸಿಂಗರಾರ್ಯ' (1680)ನು ಸದ್ಯದ ಮಟ್ಟಿಗೆ 'ಕನ್ನಡದ ಪ್ರಪ್ರಥಮ ನಾಟಕಕಾರ'ನೆಂಬ ಅಭಿಧಾನಕ್ಕೆ ಪಾತ್ರನಾಗಿದ್ದಾನೆ. 1887ರಲ್ಲಿ 'ಸೂರೀ ವೆಂಕಟರಮಣ ಶಾಸ್ತ್ರಿ'ಗಳು ಬರೆದ 'ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ'ವು 'ಕನ್ನಡದ ಮೊದಲ ಸ್ವತಂತ್ರ ನಾಟಕ' ಎಂಬ ಕೀರ್ತಿ ಪಡೆದಿದೆ. ಆದರೆ ಕನ್ನಡ ಜನಪದ ರಂಗಭೂಮಿಗಿರುವ ಒಂದು ಸುದೀರ್ಘಕಾಲದ ಶ್ರೀಮಂತ ಪರಂಪರೆಯನ್ನು ಉಪೇಕ್ಷಿಸುವಂತಿಲ್ಲ. ಏಕೆಂದರೆ ಇಂದಿನ ಕನ್ನಡ ರಂಗಭೂಮಿಗೆ ಜಾನಪದ ಪ್ರದರ್ಶಕ ಕಲೆಗಳೇ ಮೂಲಾಧಾರವಾಗಿವೆ.

ಹೀಗೆ ಬೆಳೆದು ರಂಗಭೂಮಿ ಮುಂದೆ ಜನಸಾಮಾನ್ಯರ ಮಧ್ಯದಲ್ಲಿ ಬೆಳೆದು ಬಂದ ಜನಪದ ರಂಗಭೂಮಿ, ರಾಜಾಶ್ರಯದಲ್ಲಿ ಬೆಳೆದುಬಂದ ಶಿಷ್ಟರಂಗಭೂಮಿ ಎಂಬ ಎರಡು ಪರಂಪರೆಗಳ ಹಿನ್ನೆಲೆಯಲ್ಲಿ ಕರ್ನಾಟಕ ರಂಗಭೂಮಿ ಉದಯವಾಯಿತು. ಕಾಲಾನುಕ್ರಮದಲ್ಲಿ ಆಧುನಿಕ ಕಲಾಪರಿಸರದ ಹಲವಾರು ಒತ್ತಡಗಳಿಗೆ ಒಳಗಾಗಿ, ವೃತ್ತಿರಂಗಭೂಮಿಯಾಗಿ ರೂಪಾಂತರಗೊಂಡಿತು.

ಈ ಮೂಲಕ ಕನ್ನಡ ರಂಗಭೂಮಿಯನ್ನು ಜಗತ್ತಿನ ಮೂಲೆಮೂಲೆಗೂ ಪಸರಿಸುವಂತೆ ಮಾಡುವಲ್ಲಿ ಕನ್ನಡ ವೃತ್ತಿರಂಗಭೂಮಿಯ ಪಾತ್ರ ಪ್ರಮುಖವಾದುದು. ಮರಾಠಿ ಮತ್ತು ಪಾರ್ಷಿ ನಾಟಕ ಕಂಪನಿಗಳ ಕರ್ನಾಟಕ ಪ್ರವಾಸದಿಂದಾಗಿ ಅವರ ರಂಗುರಂಗೀನ ಸೀನರಿಗಳು, ನಾಟ್ಯ ಸಂಗೀತ, ಅಚ್ಚುಕಟ್ಟಾದ ಅಭಿನಯ, ಆಕರ್ಷಕ ರಂಗಮಂಟಪ ಇವುಗಳು ಬಹುಬೇಗ ಇಲ್ಲಿನ ರಂಗಾಸಕ್ತರ ಮನಸೂರೆಗೊಂಡವು. ಇದನ್ನು ಅರಿತ 'ಕರ್ನಾಟಕ ನಾಟಕದ ಪ್ರಥಮ ಗುರು' 'ಶಾಂತಕವಿ' (ಸಕ್ಕರಿ ಬಾಳಾಚಾರರು)ಗಳು ಕನ್ನಡ ರಂಗಭೂಮಿಯ ಉಳಿವಿಗಾಗಿ ಟೊಂಕಕಟ್ಟಿ ನಿಂತರು. ಅವರ ಅವಿರತ ಪರಿಶ್ರಮದಿಂದಾಗಿ 1872–73ರಲ್ಲಿ ಕಲಾಸಕ್ತರನ್ನೆಲ್ಲಾ ಒಗ್ಗೂಡಿಸಿ ಗದಗಿನಲ್ಲಿ ಮೊದಲ ಬಾರಿಗೆ 'ಕೃತಪುರ ನಾಟಕ ಮಂಡಳಿ' ಹುಟ್ಟು ಹಾಕಿದರು. ಇದೇ ಮುಂದೆ 'ಶ್ರೀ ವೀರನಾರಾಯಣ ಪ್ರಾಸಾದಿಕ ಕೃತಪುರ ನಾಟಕ ಮಂಡಳಿ' ಹೆಸರಿನಿಂದ ಖ್ಯಾತಿ ಗಳಿಸಿತು, ಅಲ್ಲದೇ ಉಷಾಹರಣ, ಸುಂದೋಪಸುಂದ, ಶ್ರೀಯಾಳ ಸತ್ವಪರೀಕ್ಷೆ, ಕೀಚಕ ವಧೆ ಎನ್ನುವ

ಅನೇಕ ಭಕ್ತಿ ಪ್ರಧಾನ ನಾಟಕಗಳ ಮೂಲಕ ಕನ್ನಡಿಗರ ಬಾಯಲ್ಲಿ ಗುನುಗುಟ್ಟುತ್ತಿದ್ದ ಮರಾಠಿ ಚೀಜುಗಳು ಮಯಾವಾಗಿ ಕನ್ನಡ ಹಾಡಿನ ಸಾಲುಗಳು ಪ್ರತಿಧ್ವನಿಸಲಾರಂಭವಾದವು. ಇದರ ಬೆನ್ನಲ್ಲೇ ಮೈಸೂರಲ್ಲಿಯೂ ಸಹ ಪರನಾಡಿನ ಕಂಪನಿಗಳಿಗೆ ಸೆಡ್ಡು ಹೊಡಯುವ ನಿಟ್ಟಿನಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ನೇತೃತ್ವದಲ್ಲಿ 'ಶ್ರೀ ಜಯಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ ಹಾಗೂ ಮಂಡ್ಯ ರಂಗಾಚಾರ್ಯರ 'ರಾಜಧಾನಿ ನಾಟಕ ಮಂಡಳಿ'ಗಳು ಉದಯವಾಗುವ ಮೂಲಕ ನಾಡಿನಾದ್ಯಂತ ಅನೇಕ ನಾಟಕ ಮಂಡಳಿಗಳು ಹುಟ್ಟಿಕೊಳ್ಳಲು ಪ್ರೇರಪಣೆಯಾದವು. ಅಲ್ಲದೇ ಇವುಗಳಿಗೆ ಕೆಲವು ಭಾಗಗಳಲ್ಲಿ ರಾಜಾಶ್ರಯ ದೊರತರೆ, ಇನ್ನು ಕೆಲವು ಭಾಗಗಳಲ್ಲಿ ಜನಾಶ್ರಯ ದೊರೆತು ಜಾನಪದ ರಂಗಭೂಮಿಯಿಂದ ಸೊರಗಿದ್ದ ಕನ್ನಡ ರಂಗಭೂಮಿಯನ್ನು ಪುನಶ್ಚೇತನಗೊಳಿಸಿದವು.

ಇದಲ್ಲದೇ ಕಾಲಕ್ರಮೇಣ ಕೇವಲ ಮನೋರಂಜನೆಯ ಸರಕಾಗಿದ್ದ ರಂಗಭೂಮಿ ದಿನ ಕಳೆದಂತೆ ಅಧಿಕ ಹಣ ಗಳಿಕೆಯ ವಾಣಿಜ್ಯ ಮಾಧ್ಯಮವಾಗಿ ರೂಪು ತಳೆಯುತ್ತಾ ಸಾಗಿತು. 19–20ನೇ ಶತಮಾನದಲ್ಲಿ ತಲೆ ಎತ್ತಿದ ನಾಟಕ ಕಂಪನಿಗಳಲ್ಲಿ ಪರಸ್ಪರ ಪೈಪೋಟಿ ಶುರುವಾಯಿತು. ಆ ನಿಟ್ಟಿನಲ್ಲಿ 1899ರಲ್ಲಿ ಸ್ಥಾಪಿತವಾದ ಕನ್ನಡ ವೃತ್ತಿ ರಂಗಭೂಮಿಯ ಮೊದಲ ಶ್ರೀಮಂತ ನಾಟಕ ಕಂಪನಿಯಾಗಿದ್ದ ಬೆಳಗಾವಿಯ 'ಕೊಣ್ಣೂರು ಶ್ರೀ ಕಾಡಸಿದ್ದೇಶ್ವರ ಸಂಗೀತ ನಾಟಕ ಮಂಡಳಿ'ಯು ವೃತ್ತಿ ರಂಗಭೂಮಿಯ ಮೊದಲ ನಟಿ 'ಬಳ್ಳಾರಿಯ ಲಕ್ಷಸಾನಿ'ಯಂತಹ ಸ್ತ್ರೀ ಕಲಾವಿದರನ್ನು, ಡೈನೋಮೋ ವಿದ್ಯುತ್ ಆಧಾರಿತ ಬೆಳಕಿನ ವ್ಯವಸ್ಥೆಯನ್ನು, ಅತ್ಯಾಧುನಿಕ ಸಂಗೀತ ವಾದ್ಯಗಳನ್ನು ಹಾಗೂ ಜನಾಕರ್ಷಕ ವಿದ್ಯುದೀಪಗಳುಳ್ಳ ವರ್ಣರಂಜಿತ ಸೀನರಿಗಳನ್ನು ಮೊದಲ ಬಾರಿಗೆ ಪರಿಚಯಿಸಿ ಜನಮನ್ನಣೆ ಪಡೆಯಿತು. ಮುಂದೆ ಇದೇ ನವೀನ ರೀತಿಯ ಆವಿಷ್ಕಾರಗಳೊಂದಿಗೆ ಪ್ರಮುಖವಾದ 'ಗುಬ್ಬಿ ವೀರಣ್ಣನವರ 'ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಮಂಡಳಿ (ಗುಬ್ಬಿ ನಾಟಕ ಕಂಪನಿ), ಎ.ವಿ.ವರದಾಚಾರ್ಯರ 'ರತ್ನಾವಳಿ ಥಿಯೇಟ್ರಿಕಲ್ಸ್, ಸುಬ್ಬಯ್ಯ ನಾಯ್ಡುರವರ 'ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ', ಹಿರಣ್ಣಯ್ಯ ನವರ 'ಮಿತ್ರಮಂಡಳಿ' ಹೀಗೆ ಹಲವು ರಂಗತಂಡಗಳು ಹಲವಾರು ಕಸರತ್ತಿನೊಂದಿಗೆ ಮುನ್ನೆಲೆಗೆ ಬರಲಾರಂಭಿಸಿದವು.

ಆದರೆ, ಗುಬ್ಬಿ ನಾಟಕ ಕಂಪನಿ ಮಾಡಿದ ರಂಗಕ್ರಾಂತಿ ಇಡೀ ರಂಗಭೂಮಿ ಇತಿಹಾಸದಲ್ಲಿ ಅಚ್ಚಳಿಯದ ಹಾಗೆ ಉಳಿದುಕೊಂಡಿದೆ. ಗುಬ್ಬಿ ವೀರಣ್ಣನಂತಹ ಮೇರು ನಟರಿಂದ ಆ ಕಂಪನಿಯು ಸಾಮಾಜಿಕ, ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳ ಪ್ರಯೋಗಗಳಿಗಾಗಿ ಜೀವಂತ ಆನೆ, ಕುದುರೆ, ಒಂಟಿ ಮತ್ತಿತರ ಪ್ರಾಣಿಗಳನ್ನು ಸಾಕಿ ವೇದಿಕೆಗೆ ತರುತ್ತಿದ್ದರು. ಬೃಹದ್ಗಾತ್ರದ ರಥ, ಅರಮನೆಯ ಸೆಟ್‌ಗಳನ್ನು ವೇದಿಕೆಗೆ ತರುವ ಮೂಲಕ ನಾಟಕದ ವಸ್ತುಗಳನ್ನು ನೈಜಿಕರೀಸಿ ಪ್ರೇಕ್ಷಕರ ಮನಸೆಳೆದಿದ್ದವು. ಅದು ಎಷ್ಟರ ಮಟ್ಟಿಗೆ ಎಂದರೆ ಗುಬ್ಬಿ ಕಂಪನಿ ಎಲ್ಲಿಯಾದರೂ ಕ್ಯಾಂಪ್ ಮಾಡಿತ್ತೆಂದರೆ ಅಲ್ಲಿ ಯಾವುದೇ ಸಿನಿಮಾಗಳು ತೆರೆಗೆ ಬರುತ್ತಿರಲಿಲ್ಲ. ಅಷ್ಟರ ಮಟ್ಟಿಗೆ ಗುಬ್ಬಿ ಕಂಪನಿ ಪ್ರಸಿದ್ಧಿಯನ್ನು ಗಳಿಸಿತ್ತು. ಆಗಿನ ಒಂದು ನಾಟಕಕ್ಕಾಗಿಯೇ 75 ರಿಂದ 95 ಸಾವಿರ ರೂಪಾಯಿಗಳನ್ನು ವ್ಯಯಿಸಲಾಗುತ್ತಿತ್ತು. ಅಲ್ಲದೆ 150–200 ಜನ ಕಲಾವಿದರನ್ನು ಕಂಪನಿಯಲ್ಲಿ ವಿವಿಧ ವಿಭಾಗದಲ್ಲಿ ಬಳಸಿಕೊಳ್ಳಲಾಗುತ್ತಿತ್ತು. ಸುಮಾರು 7–8 ಲಾರಿಗಳಲ್ಲಿ ಗುಬ್ಬಿ ಕಂಪನಿಯ ನಾಟಕದ ಪರಿಕರಗಳನ್ನು ಒಂದು ಕ್ಯಾಂಪಿನಿಂದ ಮತ್ತೊಂದು ಕಂಪಿಗೆ ಸಾಗಿಸುತ್ತಿದ್ದರು.

ಅಲ್ಲದೇ ಇಲ್ಲಿನ ನಟ ನಟಿಯರಿಗೆ ಕೈತುಂಬಾ ಹಣ ಮತ್ತು ವಿಶೇಷ ಸವಲತ್ತುಗಳನ್ನು ನೀಡಿ ಬೇರೆ ಕಂಪನಿಗೆ ಹೋಗದಂತೆ ನೋಡಿಕೊಳ್ಳುತ್ತಿದ್ದರು. ಅಲ್ಲದೇ, ಆ ಕಂಪನಿಯಲ್ಲಿ ಪಳಗಿದ ಕಲಾವಿದರಿಗೆ ಬೇರೆಡೆಯಲ್ಲಿಯೂ ವಿಶೇಷ ಗೌರವಾದರಗಳ ಸಲ್ಲುತ್ತಿದ್ದವು.

ಇದಲ್ಲದೇ ಕಾಲಕ್ರಮೇಣ ಕಂಪನಿಗಳ ವೈಭವಪೇತ ಸೆಟ್, ರಂಗತಂತ್ರ ಮತ್ತು ನಾಟಕಗಳನ್ನು ನೋಡಲು ಬರುವ ಪ್ರೇಕ್ಷಕರಿಗಿಂತ ಅವರು ಇಷ್ಟಪಡುವ ನಟರನ್ನು ಮತ್ತು ಅವರ ಅಭಿನಯವನ್ನು ನೋಡಲು ಬರುತ್ತಿದ್ದ ಪ್ರೇಕ್ಷಕರೇ ಹೆಚ್ಚಾಗಿರುತ್ತಿದ್ದರು. ಪ್ರಮುಖ ನಟರ ಅಭಿನಯಕ್ಕಾಗಿ ಅಭಿಮಾನಿಗಳು ಚಾತಕದಂತೆ ಕಾಯುತ್ತಿದ್ದ ಅನೇಕ ಪ್ರಸಂಗಗಳನ್ನು ಉದಾಹರಿಸಬಹುದು. ಗೌರಿನರಸಿಂಹಯ್ಯನವರ ರಾಣಿ ಪಾತ್ರ, ವರದಾಚಾರ್ಯರ ನಾಯಕ ಪಾತ್ರ, ಕೃಷ್ಣಮೂರ್ತಿರಾಯರ ವಿದೂಷಕನ ಪಾತ್ರ, ಹಿರಣ್ಣಯ್ಯನವರ ಹಾಸ್ಯಪಾತ್ರ ನೋಡುವುದೆಂದರೆ ಪ್ರೇಕ್ಷಕರಿಗೆ ಎಲ್ಲಿಲ್ಲದ ಸಂತೋಷ, ಶಿರಹಟ್ಟಿ ಕಂಪನಿಯವರ 'ಕಾಳಿದಾಸ' ನಾಟಕವಿದ್ದರೆ, ವಾಮನರಾಯರ ಹಾಡು ಕೇಳಲು ಮತ್ತು ರಕ್ತರಾತ್ರಿ ನಾಟಕವಿದ್ದರೆ ಅಶ್ವತ್ಥಾಮನ ಪಾತ್ರದಲ್ಲಿ ಎಲಿವಾಳ ಸಿದ್ದಯ್ಯರನ್ನು, ಅರ್ಜುನನ ಪಾತ್ರದಲ್ಲಿ ಡಿ.ದುರ್ಗಾದಾಸ್‌ರನ್ನು ನೋಡಲು ಪ್ರೇಕ್ಷಕರ ನೂಕುನುಗ್ಗಲು ಸದಾ ಇರುತ್ತಿತ್ತು. ಗರುಡ ಸದಾಶಿವರಾಯರ, ಗುಬ್ಬಿವೀರಣ್ಣನವರ ನಟನೆ ನೋಡಲು ಜನ ಬಂಡಿಗಳನ್ನು ಕಟ್ಟಿಕೊಂಡು ಜಾತ್ರೆಗೆ ಬಂದಂತೆ ಬಂದು ರಂಗಮಂದಿರದಲ್ಲಿ ನೆರೆಯುತ್ತಿದ್ದರಂತೆ, 'ಹೇಮರೆಡ್ಡಿ ಮಲ್ಲಮ್ಮ' ನಾಟಕದ ಪ್ರಚಾರ ಮಾಡುವಾಗ 'ಲಕ್ಷ್ಮಣರಾವ ಪುರಿ ಭರಮರೆಡ್ಡಿ ಪಾತ್ರ ವಹಿಸುತ್ತಾರೆಯೇ?' ಎಂದು ಜನ ಕೇಳುತ್ತಿದ್ದರಂತೆ, ಶಿರಹಟ್ಟಿ ಕಂಪನಿಯವರು 'ಲಂಕಾದಹನ', 'ಸಂಪೂರ್ಣ ರಾಮಾಯಣ' ನಾಟಕಗಳ ಪ್ರಚಾರ ಮಾಡುವ ಕಾಲಕ್ಕೆ ಜನರನ್ನಾಕರ್ಷಿಸಲು ಬೆಳ್ಳೂರು ನಂಜುಂಡಯ್ಯನವರನ್ನು ಆಂಜನೇಯನ ವೇಷದಲ್ಲಿಯೇ ಮೆರೆಸುತ್ತಿದ್ದರಂತೆ. ಮಹಮ್ಮದ್ ಪೀರ್, ಹಂದಿಗನೂರ ಸಿದ್ರಾಮಪ್ಪ, ಎಂ.ಎನ್. ಗಂಗಾಧರರಾಯರು, ಅದೃಶ್ಯಪ್ಪ ಮಾನವಿ, ಏಣಗಿ ಬಾಳಪ್ಪ, ಎಚ್ .ಟಿ. ಅರಸ್, ಬಳ್ಳಾರಿ ರಾಘವ, ಮುಂತಾದವರು ಅಭಿನಯಿಸುತ್ತಾರೆಂದು ತಿಳಿದರೆ ಸಾಕು, ನಿಂತುಕೊಂಡಾದರೂ ತಮ್ಮ ನೆಚ್ಚಿನ ನಟನ ಅಭಿನಯ ನೋಡಲು ಜನ ಮುಗಿಬೀಳುತ್ತಿದ್ದರಂತೆ. ಹೀಗೆ ಒಂದಿಲ್ಲೊಂದು ವಿಶಿಷ್ಟತೆಯಿಂದ ಪ್ರೇಕ್ಷಕರನ್ನು ಆಕರ್ಷಿಸುತ್ತಿದ್ದ ನಟರ ದೊಡ್ಡ ಪಡೆಯೇ ನಮ್ಮಲ್ಲಿತ್ತು. ಒಂದರ್ಥದಲ್ಲಿ ವೃತ್ತಿರಂಗಭೂಮಿಯ ಯುಗವೆಂದರೆ ನಟರ ಯುಗವೇ ಎಂದು ಹೇಳಬೇಕು. ಇದರ ಜೊತೆ ಜೊತೆಗೆ ಪಿ.ಬಿ.ದುತ್ತರಗಿ,ಕಂದಗಲ್ ಹನುಮಂತರಾಯ, ನಲ್ವಡಿ ಶ್ರೀಕಂಠ ಶಾಸ್ತ್ರಿಗಳು, ಬೆಳ್ಳಾವೆ ನರಹರಿಶಾಸ್ತ್ರಿ, ಜಿ.ಜಿ.ಹೆಗಡೆ, ವಾಮನ ರಾವ್ ಮಾಸ್ತರ್ ರಿಂದ ಹಿಡಿದು ಇತ್ತೀಚಿನ ಕ್ಯಾಸೆಟ್ ಕಿಂಗ್ ಬಿ.ವಿ.ಈಶರವರ ನಾಟಕಗಳಿಗೂ ಕೂಡ ಆಗೀನ ಕಾಲದ ನಟರಿಗೆ ದೊರೆತ ಪ್ರಸಿದ್ಧಿ ದೊರೆಯುತ್ತಿದ್ದುದನ್ನು ನೋಡಿದ ಮತ್ತು ಅನುಭವಿಸಿದ ಬಿ.ಆರ್.ಅರಿಶಿಣಗೋಡಿ, ಬಸವರಾಜ ಗುಡಗೇರಿ, ಏಣಗಿ ಬಾಳಪ್ಪ ಮತ್ತಿತರೆ ಹಿರಿಯ ರಂಗಕರ್ಮಿಗಳು ಪತ್ರಿಕಾ ಸಂದರ್ಶನಗಳಲ್ಲಿ ಹಂಚಿಕೊಂಡಿದ್ದಾರೆ.

ಕೇವಲ ಮನೋರಂಜನೆ ವಸ್ತುಗಳಿಂದಲೇ ಸಮಾಜದ ಅಂಕು ಡೊಂಕುಗಳನ್ನು ತಿದ್ದುತ್ತ ಕನ್ನಡ ಮಹತ್ವವನ್ನು ಇಡೀ ಜಗತ್ತಿಗೆ ಸಾರಿದ ಮತ್ತು ವೈಭವಯುತವಾಗಿ ಮೆರೆದ ಕನ್ನಡದ ವೃತ್ತಿರಂಗಭೂಮಿಯು ಶ್ರೇಷ್ಠ ನಟನಟಿಯರ ಹಾಗೂ ಕಂಪನಿ ಮಾಲೀಕರ ಮರಣದ ನಂತರ ಕಾಲಕ್ರಮೇಣ ತೆರೆಮರೆಗೆ ಸರಿಯಲಾರಂಭಿಸಿದವು. ಅಲ್ಲದೇ 20ನೇ ಶತಮಾನದ ಅಂತ್ಯಕ್ಕೆಲ್ಲ ವೃತ್ತಿರಂಗಭೂಮಿಯು ಅವಸಾನದ

ಅಂಚಿಗೆ ತಲುಪಿತು. ಅಂದಿನ ದಿನಮಾನಗಳಲ್ಲಿ ಎಷ್ಟು ವೇಗದಲ್ಲಿ ನಾಟಕ ಕಂಪನಿಗಳು ತಲೆಎತ್ತಿದವೋ, ಅಷ್ಟೇ ವೇಗದಲ್ಲಿ ಇಂದಿನ ದಿನಮಾನಗಳಲ್ಲಿ ಅವೇ ನಾಟಕ ಕಂಪನಿಗಳು ಹತವಾಗ ತೊಡಗಿವೆ. ಇದಕ್ಕೆ ಕಾರಣಗಳನ್ನು ಹುಡುಕುತ್ತಾ ಹೊರಟಂತೆಲ್ಲಾ ಸಿಗುವ ಜವಾಬುಗಳು ನೂರಾರು. ಇವತ್ತಿಗೂ ಕೆಲವು ಕಂಪನಿ ಮಾಲೀಕರು ತಮ್ಮ ಕಂಪನಿಗಳು ಮುಚ್ಚುವಾಗ ಆಡಿದ ನುಡಿಗಳ ಮೂಲಕ ವೃತ್ತಿರಂಗಭೂಮಿಯ ಅವಸಾನಕ್ಕೆ ಕಾರಣಗಳನ್ನು ಅರಿಯಬಹುದಾಗಿದೆ.

ಕಂಪನಿಗಳಲ್ಲಿದ್ದ ನಟನಟಿಯರ ಅರಾಜಕತೆ ಮಾಲೀಕರ ಮತ್ತು ವ್ಯವಸ್ಥಾಪಕರ ಅನಾದರಗಳಿಂದ ಕಂಪನಿಗಳು ಅಧೋಗತಿಗೆ ಇಳಿದವು. ಅಲ್ಲದೇ ಕಲಾವಿದರ ಕುಂದು ಕೊರತೆಗಳು ಹೆಚ್ಚಾದಂತೆ ಅವರಲ್ಲಿ ಬದ್ಧತೆ, ಭಕ್ತಿ, ಸ್ವಾಮಿನಿಷ್ಠೆಯಂತಹ ಮೌಲ್ಯಗಳು ಮಯಾವಾಗಿ ಕೇವಲ ದುಡ್ಡಿಗಾಗಿ ದುಡಿಯುವ ಕೃತಕ ಬೆಂಬೆಗಳಾದರು. ಇದರೊಂದಿಗೆ ಕಂಪನಿಯ ಏಳ್ಗೆಗಾಗಿ ಹಗಲಿರುಳು ದುಡಿಯುತ್ತಿದ್ದ ಕಲಾವಿದರ ನಡುವೆ ಕೇವಲ ಕಂಪನಿಯ ಸಂಬಳಕ್ಕಾಗಿ ಹಾತೊರೆಯುವ ಕಲಾವಿದರು ಹೆಚ್ಚಾದರು. ಅಲ್ಲದೆ ಯಾವುದೇ ಮುನ್ಸೂಚನೆಯಿಲ್ಲದೇ ಕಲಾವಿದರು ಬೇರೊಂದು ಕಂಪನಿಗಳಿಗೆ ಹೋಗಿ ನಿಗಧಿಪಡಿಸಿದ ನಾಟಕಗಳಲ್ಲಿ ಭಾಗಿಯಾಗದೇ, ಇದರಿಂದ ನಾಟಕ ಪ್ರದರ್ಶನಗಳಾಗದೆ, ನಾಟಕ ಪ್ರದರ್ಶನಕ್ಕೆ ತಂದ ಸಾಲಕ್ಕೆ ಬಡ್ಡಿ ತೆರಲಾಗದೆ ಸಾವಿರಾರು ರೂಪಾಯಿಗಳು ನಷ್ಟವಾಗಿ ಕಂಪನಿಗಳು ಮುಚ್ಚುವ ಸ್ಥಿತಿಗೆ ತಲುಪಿದವು. ಆಗಲೂ ಎದೆಗುಂದದೆ ಅತೀವ ರಂಗಾಸಕ್ತಿ ಹೊಂದಿದ ಬಹುತೇಕ ಕಂಪನಿಯ ಮಾಲೀಕರು ತಮ್ಮ ಆಸ್ತಿಪಾಸ್ತಿಗಳನ್ನು ಮಾರಿ ಕಂಪನಿಗಳನ್ನು ಮುನ್ನಡೆಸಲು ಯತ್ನಿಸಿದರಾದರೂ ಅಷ್ಟೊತ್ತಿಗಾಗಲೇ ಕಂಪನಿಗಳ ಸೀನರಿಗಳು ಮಾಸಿಹೋಗಿ ಸಿನಿಮಾಗಳ ಬೆಳ್ಳಿಪರದೆಗಳು ಬೃಹತ್ ಗೋಡೆಗಳ ಮೇಲೆ ರಾರಾಜಿಸಲಾರಂಭಿಸಿದ್ದವು.

ಇದರ ಪರಿಣಾಮವಾಗಿ ಗುಬ್ಬಿ ವೀರಣ್ಣನಂತಹ ಕೆಲ ಮಾಲೀಕರು ಮತ್ತು ಪ್ರಮುಖ ರಂಗನಟರೆಲ್ಲರೂ ಸಿನಿಮಾದತ್ತ ಒಲವು ತೋರಲಾರಂಭಿಸಿದ ಕಾರಣ ಅವರ ಅಭಿಮಾನಿ ಪ್ರೇಕ್ಷಕರು ಸಹ ಇತ್ತಲೇ ಧಾವಿಸಿದರು. ಇದರಿಂದಾಗಿ ಕಾಲಕ್ರಮೇಣ ವೃತ್ತಿರಂಗಭೂಮಿಯವರನ್ನು ಸಿನಿಮಾ ಎಂಬ ರೈಲು ಸೆಳೆಯಿತು. ಈಗ ಹವ್ಯಾಸಿ ರಂಗಭೂಮಿ ಕಲಾವಿದರನ್ನು ದೂರದರ್ಶನಗಳು ಸೆಳೆಯುತ್ತಿವೆ. ಆದರೆ ಇದ್ದಲ್ಲೇ ಸೊರಗುತ್ತಿರುವ ವೃತ್ತಿರಂಗಭೂಮಿಯು ದ್ವಂದ್ವಾರ್ಥದ ಸಂಭಾಷಣೆ, ಸಭ್ಯವೆನಿಸದ ಹಾಡು ನೃತ್ಯ ಹಾಗೂ ಅನಗತ್ಯ ಹಾವಭಾವಗಳ ಜೊತೆಗೆ ಹಾಸ್ಯ ಸೇರಿಕೊಂಡು ಸಿನಿಮಾ ಮತ್ತು ದೂರದರ್ಶನ ಎದುರು ಹೆಣಗಾಡುತ್ತಿದೆ.

ಎಲ್ಲದಕ್ಕಿಂತ ಮಿಗಿಲಾಗಿ ಹವ್ಯಾಸಿ ರಂಗಭೂಮಿಯ ವರ್ಥಮಾನ ಕಾಲದಲ್ಲಿ ವೃತ್ತಿರಂಗಭೂಮಿಯನ್ನು ಕುರಿತು ಇದರಲ್ಲಿ ಅಶ್ಲೀಲ ನೃತ್ಯ, ಸಂಭಾಷಣೆಗಳಿವೆ ಎಂದೇಳಿ ಮೂದಲಿಸಿ ಮೂಲೆಗೆ ತಳ್ಳಿದ ಹವ್ಯಾಸಿ ಕಲಾವಿದರೆ ಇಂದು ಹೆಚ್ಚಾಗಿ ಅಶ್ಲೀಲ ನೃತ್ಯಗಳು, ದೃಶ್ಯಗಳಿರುವ ಟಿವಿ, ಸಿನಿಮಾದತ್ತ ಮುಖ ಮಾಡಿರುವುದು ನಿಜಕ್ಕೂ ವಿಷಾಧನೀಯವಾಗಿದೆ. ಆದರೂ ಇಂದಿಗೂ ಒಳ್ಳೆಯ ನಾಟಕ, ಸಂಗೀತ, ನಟ,ನಟಿಯರಿಂದ ಕೂಡಿದ ನಾಟಕಗಳನ್ನು ನೋಡಲು ಇಂದಿಗೂ ಕಂಪನಿಗಳಿಗೆ ಪ್ರೇಕ್ಷಕರು ಬರುತ್ತಾರೆ. ಇದರೊಂದಿಗೆ ಟಿ.ವಿ ಸಿನಿಮಾ ನಡುವೆ ವೃತ್ತಿರಂಗಭೂಮಿ ಜೀವಂತವಾಗಿರುವುದನ್ನು ಕಾಣಬಹುದು.

ಆದರೆ 20ನೇ ಶತಮಾನದ ಅಂತ್ಯಕ್ಕೆಲ್ಲ ಕ್ರಿಯಾಶೀಲ ಹವ್ಯಾಸಿ ರಂಗಭೂಮಿ ಉದಯವಾಗುತ್ತಿದ್ದಂತೆ ಏಕತಾನತೆಯ ನಾಟಕಗಳಿಂದ ಮತ್ತುಹಾಸ್ಯದ ನೆಪದಲ್ಲಿ ಅಶ್ಲೀಲ ಸಂಭಾಷಣೆಗಳ,ದ್ವಂದ್ವಾರ್ಥದ

ಸಂಭಾಷಣೆಗಳ ಹಾದಿ ಹಿಡಿದ ವೃತ್ತಿರಂಗಭೂಮಿ ಹಾಗೂ ಅತಿಯಾದ ಅತ್ಯಾಕರ್ಷಕ ಸಿನಿಮಾ ರಂಗದೊಂದಿಗೆ ಕಾಲಕ್ರಮೇಣ ಸ್ಪರ್ಧಿಸಲಾಗದೆ ಪ್ರಮುಖ ನಾಟಕ ಕಂಪನಿಗಳು ಸಾಲುಸಾಲಾಗಿ ಮಕಾಡೆ ಮಲಗಿದವು. ಆದರೂ ಅವುಗಳ ಪುನಶ್ಚೇತನಕ್ಕಾಗಿ ಮಾಲೀಕರು ತಮ್ಮ ಆಸ್ತಿಪಾಸ್ತಿಗಳನ್ನು ಮಾರಿಕೊಂಡರು. ಆದರೆ ಯಾವುದೇ ಪ್ರಯೋಜನವಾಗಲಿಲ್ಲ.ಬದಲಿಗೆ ಮಾಡಿಕೊಂಡ ಸಾಲದ ಬಡ್ಡಿ ಕಟ್ಟಲಾಗದೇ ತಮ್ಮ ಕಂಪನಿಯ ಜಾಗವನ್ನು ಮತ್ತು ವಸ್ತುಗಳನ್ನು ಮಾರಿದರು. ಅಂತೆಯೇ ಮಾರಿದ ಆ ಸ್ಥಳಗಳಲ್ಲಿ ಇಂದು ಸಿನಿಮಾ ಟಾಕೀಸುಗಳು, ಬೃಹತ್ ಮಲ್ಟಿಪ್ಲೆಕ್ಸ್ ಮಳಿಗೆಗಳು ತಲೆಎತ್ತಿವೆ. ಅವುಗಳನ್ನು ನಂಬಿದ ಕಲಾವಿದರು, ಮಾಲೀಕರು ಅಕ್ಷರಶಃ ಬೀದಿಗೆ ಬಂದು ನಿಲ್ಲಲು ನೆಲೆಯಿಲ್ಲದೆ, ಬದುಕಲು ಬಲವಿಲ್ಲದೇ ಒಂದ್ಹೊತ್ತಿನ ಊಟಕ್ಕೂ ಪರದಾಡುತ್ತಿದ್ದಾರೆ. ಕಾಲಕ್ರಮೇಣ ಈ ಸ್ಥಿತಿ ಬಹುತೇಕ ಎಲ್ಲ ಕಲೆಗಳ ಕಲಾವಿದರಿಗೆ ಅವರಿಸಿದೆ. ಅದರಲ್ಲೂ ಅನಾರೋಗ್ಯ ಪೀಡಿತ ಕಲಾವಿದರ ಸ್ಥಿತಿಯಂತೂ ಹೇಳತೀರದು. ಕೊನೆಗಾಲದಲ್ಲಿ ಸೂಕ್ತ ಹಾರೈಕೆ ಮತ್ತು ಸೂಕ್ತ ಚಿಕಿತ್ಸೆಯಿಲ್ಲದೆ ಎಲಿವಾಳ ಸಿದ್ದಯ್ಯರಂತಹ ಮೇರುನಟರು ಬೀದಿಯಲ್ಲಿ ಅನಾಥ ಹೆಣವಾಗಿ ಕಥೆಯಾದುದನ್ನು ಕಂಡು ಕೇಳಿದ್ದೇವೆ. ಈ ರೀತಿ ರಂಗುರಂಗೀನ ಹಾಗಾಗಿ ಕಲಾವಿದರು ಬಣ್ಣ ಅಳಿಸುವ ಮೊದಲೇ ಅವರ ಬದುಕಿಗೆ ಬಣ್ಣ ತುಂಬುವ ಮಹತ್ಕಾರ್ಯವಾಗಬೇಕಿದೆ.

ವೃತ್ತಿರಂಗಭೂಮಿಗೆ ಸುಮಾರು ನೂರಿಪ್ಪತ್ತೈದು ವರ್ಷಗಳ ಇತಿಹಾಸವಿದೆ. ಆದರೆ ನೆರೆಯ ಮಹಾರಾಷ್ಟ್ರದಲ್ಲಿ ನಾಟಕ ಕಲೆಗೆ ದೊರೆತಿರುವಂಥ ಪ್ರೋತ್ಸಾಹ ಕರ್ನಾಟಕದಲ್ಲಿ ದೊರೆತಿಲ್ಲ. ನಾಟಕ ಅಕಾಡೆಮಿ ಇದ್ದರೂ ಅದು ವೃತ್ತಿರಂಗಭೂಮಿಗಿಂತ ಹವ್ಯಾಸಿ ರಂಗಭೂಮಿಗೆ ಹೆಚ್ಚು ಮಹತ್ವ ಕೊಡುತ್ತ ಬಂದಿದೆ. ನಾಟಕಕಾರ, ನಟರಿಗೆ ಆಗಾಗ ಪ್ರಶಸ್ತಿ ಕೊಡುವುದರಿ0ದಲೇ ನಾಟಕ ಕಲೆ ಉಳಿಯಲಾರದು. ಕರ್ನಾಟಕ ಸರ್ಕಾರ ವೃತ್ತಿರಂಗಭೂಮಿಯ ಉಳುವಿಗಾಗಿ ಕೆಲವೊಂದು ಯೋಜನೆಗಳನ್ನು ಹಮ್ಮಿಕೊಳ್ಳುವುದು ಒಳ್ಳೆಯದು. ಜಿಲ್ಲೆಗೊಂದಾದರೂ ಉತ್ತಮ ಸುಸಜ್ಜಿತ ರಂಗಮಂದಿರವನ್ನು ನಿರ್ಮಿಸಿ ವೃತ್ತಿನಾಟಕ ಕಂಪನಿಗಳಿಗೆ ಕಡಿಮೆ ಬಾಡಿಗೆ ದರದಲ್ಲಿ ನೀಡಬೇಕು. ಪ್ರತಿಯೊಂದು ತಾಲೂಕಿನಲ್ಲೂ ಹೆಚ್ಚು ಹಣ ಖರ್ಚು ಮಾಡದಿದ್ದರೂ, ತೀರಾ ಅಗತ್ಯವಾದಷ್ಟು ಹಣವನ್ನು ವೆಚ್ಚ ಮಾಡಿ ರಂಗಮಂದಿರಗಳನ್ನು ನಿರ್ಮಿಸಬೇಕು. ಕಂಪನಿಗಳಿಗೆ ಹೋದೆಡೆಯಲ್ಲೆಲ್ಲ ಕಡಿಮೆ ದರದಲ್ಲಿ ಆಹಾರ ಪೂರೈಕೆ, ಕಲಾವಿದರ ಮಕ್ಕಳಿಗೆ ಯೋಗ್ಯ ಶಿಕ್ಷಣ ದೊರೆಯುವಂತೆ ಮಾಡಬೇಕು.

ಇದಲ್ಲದೇ ಪರಸ್ಪರ ವೃತ್ತಿ ಮತ್ತು ಹವ್ಯಾಸಿ ರಂಗಭೂಮಿ ಕಲಾವಿದರನ್ನು ಮಾಲೀಕರನ್ನು ಸೇರಿಸಿ ಸಹಬಾಳ್ವೆಯ ರಂಗಭೂಮಿ ಏಳ್ಗೆಗೆ ಪೂರಕವಾಗುವ ಕಾರ್ಯಾಗಾರಗಳನ್ನು ಕೈಗೆತ್ತಿಕೊಳ್ಳುವಂತೆ ಮಾಡುವುದು. ಮತ್ತು ಇರ್ವರ ಸಂಗಮದಿಂದ ನವೀನ ಕ್ರಿಯಾತ್ಮಕ ಶೈಲಿಯ ನಾಟಕಗಳನ್ನು ತಂದು ಅವುಗಳಿಗೆ ಕನ್ನಡ ಸಿನೇಮಾಗಳಿಗೆ ನೀಡುವ ಸಹಾಯಧನವನ್ನು ಇವುಗಳಿಗೂ ನೀಡಬೇಕು. ಅಲ್ಲದೇ ಕಲಾವಿದರಿಗೂ, ಕಲಾಸಕ್ತರಿಗೂ ರಂಗಭೂಮಿಯ ಮಹತ್ವವನ್ನು ಸಾರುವ ಪಠ್ಯವನ್ನು ಶಾಲಾ –ಕಾಲೇಜುಗಳಲ್ಲಿ ಇರಿಸಿ ಅವುಗಳ ಬೋಧನೆಗೆ ಸುಶಿಕ್ಷಿತ ಕಲಾವಿದರನ್ನು ನೇಮಿಸಬೇಕು. ಈಗಾಗಲೇ ಸರ್ಕಾರವೂ ಸಹ ವೃತ್ತಿರಂಗಭೂಮಿ ಪುನಶ್ಚತನಕ್ಕಾಗಿ ಸರಕಾರ 'ಕಾಯಕಲ್ಪ ಯೋಜನೆ'ಯಡಿಯಲ್ಲಿ ವೃತ್ತಿರಂಗ ತಂಡಗಳನ್ನು ಪೋಷಿಸುವ ಕೆಲಸ ಮಾಡುತ್ತಿದೆ. ಇದರ ಜೊತೆಗೆ ಕೆಲವು ದೇಶಗಳಲ್ಲಿ ನಾಗರಿಕರಿಂದ ಸಂಗ್ರಹಿಸಿದ ಮನರಂಜನೆಯ ತೆರಿಗೆಯಿಂದ ಅಲ್ಲಿಯ ರಂಗಸಂಸ್ಥೆಗಳನ್ನು ಪೋಷಿಸುವ ವ್ಯವಸ್ಥೆ ಇದೆ. ಅಂಥ ನಿಯಮಿತ

ವ್ಯವಸ್ಥೆಯನ್ನು ನಮ್ಮ ಸರಕಾರವೂ ಜಾರಿಗೊಳಿಸಬೇಕು. ಲೈಸನ್ಸ್ ನೇಮಗಳನ್ನು ಸರಳೀಕರಿಸಬೇಕು. ಸಹಾಯಧನಕ್ಕಿಂತ ಅನುದಾನದ ಅಡಿಯಲ್ಲಿ ನಾಟಕ ಕಂಪನಿಗಳನ್ನು ಬದುಕಿಸುವ, ಅವುಗಳಿಗೆ ನೆರವಾಗುವ ಸಾಂಸ್ಕೃತಿಕ ನೀತಿಯನ್ನು ಸರಕಾರ ರೂಪಿಸಬೇಕಾಗಿದೆ. ಇಂಥ ನೀತಿ ಕಂಪನಿಗಳ ಗುಣಮಟ್ಟವನ್ನು ಮತ್ತು ಪ್ರಾಮಾಣಿಕ ಸೇವೆಯನ್ನು ಪ್ರೋತ್ಸಾಹಿಸುವಂತಾಗಬೇಕು.

ಆ ಮೂಲಕವಾದರೂ ಒಂದು ಕಾಲದಲ್ಲಿ ಇತಿಹಾಸ ನಿರ್ಮಿಸಿದ ವೃತ್ತಿರಂಗಭೂಮಿ ಇತಿಹಾಸದ ಭಾಗವಾಗಿ ಹೋಗಬಾರದು. ಅದು ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಉಳಿಯಬೇಕು. ಇಂದಿನಿಂದ 'ಅಮೋಘ ಪ್ರಾರಂಭ' ಎನ್ನುವಂಥ ಹೊಸ ನಾಟಕದ ಹುಮ್ಮಸ್ಸಿನ ಪ್ರಚಾರ ಅಲ್ಲಲ್ಲಿ ಕೇಳಿ ಬರಬೇಕು. ದಿನದಿಂದ ದಿನಕ್ಕೆ ಪ್ರಯೋಗಗಳ ಸಂಖ್ಯೆ ಬೆಳೆಯಬೇಕು. 100–150ನೇ ಪ್ರಯೋಗ ಎಂದು ಬರೆದಿಟ್ಟ ಬೋರ್ಡುಗಳು ರಂಗಮಂದಿರದ ಎದುರು ರಾರಾಜಿಸಬೇಕು. ಪ್ರೇಕ್ಷಕರು ಪ್ರೀತಿಯಿಂದ, ಅಭಿಮಾನದಿಂದ ನಾಟಕಗಳ ಬಗ್ಗೆ, ನಟ–ನಟಿಯರ ಅಭಿನಯದ ಬಗ್ಗೆ ಮಾತನಾಡಬೇಕು. ಅಂಥ ದಿನಗಳಿಗಾಗಿ ನಾವು ಹಾರೈಸೋಣ.

**ಆಕರ ಗ್ರಂಥಗಳು**


- ಗಣೇಶ ಅಮೀನಗಡ. (2003). *ಪ್ರಯೋಗ ಪ್ರಸಂಗ.* ಅರಿವು ಪ್ರಕಾಶನ,ಬೆಂಗಳೂರು.
- ಲಕ್ಷ್ಮಣ ಕೌಂಟೆ. (2015). *ಕರ್ನಾಟಕ ವೃತ್ತಿ ರಂಗಭೂಮಿ.* ಭುವನೇಶ್ವರಿ ಪ್ರಕಾಶನ, ಬೀದರ್.
- ಪ್ರಕಾಶ ಗರೂಡ. (1998). *ವೃತಿ ರಂಗಭೂಮಿ ಸ್ವರೂಪ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ರಾಮಕೃಷ್ಣ ಮರಾಠೆ. (2004). *ತೆರೆ ಮರೆ: ನಾಟಕ ಕಂಪನಿಗಳ ಸಂಕಥನ.* ಸಿವಿಜಿ ಪಬ್ಲಿಕೇಷನ್, ಬೆಂಗಳೂರು.
- ರಂಗನಾಥ್. ಕೆ.ಎಚ್. (2011). *ಕರ್ನಾಟಕ ರಂಗಭೂಮಿ.* ಹೇಮಂತ ಸಾಹಿತ್ಯ, ಬೆಂಗಳೂರು.